■ ಹನಿ


## ರಾಜಕಾರಣಿ ಸಚಿನ್

ಸಚಿನ್ ರಮೇಶ್ ತೆಂಡೂಲ್ಕರ್ (ಬರ್ತ್‌ಡೇ 24-4-1973) ರಾಜ್ಯಸಭೆಯ ಸದಸ್ಯರಾಗಿ ನಾಮಕರಣ ಹೊಂದಿರುವುದು ಇದೀಗ ಚರ್ಚೆಗೆ ಗ್ರಾಸವಾಗಿದೆ. 'ರಾಷ್ಟ್ರಪತಿಯವರು ಸಚಿನ್ ತೆಂಡೂಲ್ಕರ್ ಅವರ ಹೆಸರನ್ನು ರಾಜ್ಯಸಭೆಗೆ ಶಿಫಾರಸು ಮಾಡುವ ಮೂಲಕ ಸಂವಿಧಾನದ ನಿಯಮದ ಉಲ್ಲಂಘನೆಯಾಗಿದೆ' ಎನ್ನುವ ವಾದ ಕೇಳಿಬಂದಿದೆ. ಅಲಹಾಬಾದ್ ಹೈಕೋರ್ಟಿನ ಲಖನೌ ಪೀಠಕ್ಕೆ ವಕೀಲರೊಬ್ಬರು ಈ ಬಗ್ಗೆ ಸಲ್ಲಿಸಿರುವ ಆಕ್ಷೇಪಣಾ ಅರ್ಜಿಯನ್ನು ನ್ಯಾಯಾಧೀಶರ ಪೀಠವು ಸಾರ್ವಜನಿಕ ಹಿತಾಸಕ್ತಿ ಪೀಠದ ಕಡೆಗೆ ನಿರ್ದೇಶಿಸಿದೆ. 'ಸಂವಿಧಾನದ ಪರಿಚ್ಛೇದ 80(3)ರ ಪ್ರಕಾರ, ಸಾಹಿತ್ಯ, ವಿಜ್ಞಾನ, ಕಲೆ ಮತ್ತು ಸಮಾಜ ಸೇವೆಗಳಲ್ಲಿ ವಿಶೇಷ ಜ್ಞಾನ, ಪ್ರಾಯೋಗಿಕ ಅನುಭವ ಉಳ್ಳವರನ್ನು ರಾಜ್ಯಸಭೆಗೆ ನಾಮಕರಣ ಮಾಡಬಹುದು. ಆ ನಿಯಮದಲ್ಲಿ ಕ್ರೀಡಾಪಟುವನ್ನು ನಾಮಕರಣ ಮಾಡಲು ಅವಕಾಶ ಇಲ್ಲ' ಎನ್ನುವುದು ವಕೀಲರ ವಾದ. ಹೈಕೋರ್ಟಿನ ಸಾರ್ವಜನಿಕ ಹಿತಾಸಕ್ತಿ ಪೀಠ ಈ ಕುರಿತು ಏನು ಹೇಳಲಿದೆ ಎನ್ನುವುದು ಕುತೂಹಲಕ್ಕೆ ಕಾರಣವಾಗಿದೆ.



ಸಚಿನ್ ತೆಂಡೂಲ್ಕರ್ ಅದ್ಭುತ ಕ್ರಿಕೆಟರ್ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಕ್ರೀಡಾಪಟುವೊಬ್ಬರನ್ನು ರಾಜ್ಯಸಭೆಗೆ ನಾಮಕರಣ ಮಾಡಿರುವುದು ಇದೇ ಮೊದಲೂ ಅಲ್ಲ. ಈ ಹಿಂದೆ ಖ್ಯಾತ ಕುಸ್ತಿಪಟು ದಾರಾಸಿಂಗ್ ಅವರನ್ನು ರಾಜ್ಯಸಭೆಗೆ ನಾಮಕರಣ ಮಾಡಿದ್ದಾಗ ಈ ರೀತಿಯ ಆಕ್ಷೇಪಗಳು ಬಂದಿರಲಿಲ್ಲ. ದಾರಾಸಿಂಗ್ ಅವರು ರಾಜ್ಯಸಭೆಯ ಸದಸ್ಯರಾಗಿ ವಿಶೇಷವಾಗಿ ಕುಸ್ತಿಗೆ ಅಥವಾ ಕ್ರೀಡಾಕ್ಷೇತ್ರಕ್ಕೆ ಉಂಟಾದ ಲಾಭ ಏನು ಎನ್ನುವುದು ಅಷ್ಟು ಸ್ಪಷ್ಟವಿಲ್ಲ. ಆದರೆ ಅವರ ನಾಮಕರಣವನ್ನು ಕ್ರೀಡೆಯ ಜಯ ಎಂಬಂತೆ ಸಂಭ್ರಮದಿಂದಲೇ ಸ್ವಾಗತಿಸಲಾಗಿತ್ತು. ಈಗ ಸಚಿನ್ ತೆಂಡೂಲ್ಕರ್ ಅವರು ರಾಜ್ಯಸಭೆಗೆ ನಾಮಕರಣವಾದಾಗ 'ಇದರಿಂದ ಕ್ರಿಕೆಟ್‌ಗೆ ಮತ್ತು ಕ್ರೀಡಾಕ್ಷೇತ್ರಕ್ಕೆ ಆಗಲಿರುವ ಲಾಭಗಳೇನು' ಎಂಬ ಪ್ರಶ್ನೆಯೂ ಚರ್ಚೆ ಆಗುತ್ತಿದೆ. ಕಳೆದ 22 ವರ್ಷಗಳ ತಮ್ಮ ಅಂತರರಾಷ್ಟ್ರೀಯ ಕ್ರಿಕೆಟ್ ವೃತ್ತಿಜೀವನದಲ್ಲಿ ಕ್ರಿಕೆಟ್ ಅಥವಾ ಸಮಗ್ರ ಕ್ರೀಡಾರಂಗದ ಬಗ್ಗೆ ಚರ್ಚೆ ನಡೆದಾಗ ಸಚಿನ್ ತೆಂಡೂಲ್ಕರ್ ಬಾಯಿ ಬಿಟ್ಟು ಮಾತನಾಡಿದ್ದು ಇಲ್ಲವೇ ಇಲ್ಲ ಎನ್ನಬಹುದು. ವೈಯಕ್ತಿಕ ದಾಖಲೆಗಳನ್ನು ಮಾಡುವತ್ತಲೇ ಗಮನ ಹರಿಸಿದ ಸಚಿನ್, ಕ್ರಿಕೆಟ್‌ನಿಂದ ಪಡೆದ ಲಾಭಗಳಿಗೆ ಹೋಲಿಸಿದರೆ, ಕ್ರಿಕೆಟ್ ಬೆಳವಣಿಗೆಗೆ ನೀಡಿದ ವ್ಯಕ್ತಿಗತ ಕೊಡುಗೆಯೂ ಶೂನ್ಯ ಎನ್ನುವವರಿದ್ದಾರೆ. ತಮ್ಮ ಬ್ಯುಸಿ ಕ್ರಿಕೆಟ್ ಕಾರ್ಯಕ್ರಮಗಳ ಮಧ್ಯೆ ಸಚಿನ್ ರಾಜ್ಯಸಭೆಗೆ ಹೋಗಿ ಹೆಚ್ಚು ಹೊತ್ತು ಕುಳಿತುಕೊಳ್ಳುವುದೂ ಅನುಮಾನವೇ. ಹಾಗಾಗಿ ಈ ನಾಮಕರಣದಿಂದ ಬಂದ ಭಾಗ್ಯವೇನು? ಎನ್ನುವ ಪ್ರಶ್ನೆ ಸಹಜವೇ.

ತಮ್ಮ ಕ್ರಿಕೆಟ್ ಸಾಧನೆಗೆ ಈಗಾಗಲೆ ಪದ್ಮವಿಭೂಷಣ, ರಾಜೀವ್‌ಗಾಂಧಿ ಖೇಲ್ ರತ್ನ, ಭಾರತೀಯ ವಾಯುಪಡೆಯ 'ಗ್ರೂಪ್ ಕ್ಯಾಪ್ಟನ್' ಮುಂತಾದ ಪ್ರತಿಷ್ಠಿತ ಪ್ರಶಸ್ತಿಗಳನ್ನು ಗಳಿಸಿರುವ ಸಚಿನ್‌ಗೆ ರಾಜ್ಯಸಭೆಯ ಸದಸ್ಯತ್ವವೂ ಬೇಕಿತ್ತೆ.. ಎನ್ನುವುದು ಮೌಲ್ವಿಕ ಪ್ರಶ್ನೆಯೇ.



## ರಾಮದೇವ್ ರಗಳೆ

ಯೋಗಗುರು ಬಾಬಾ ರಾಮದೇವ್ ಮತ್ತೆ ಸುದ್ದಿಯ ಕೇಂದ್ರವಾಗಿದ್ದಾರೆ. 'ಸಂಸತ್ತಿನಲ್ಲಿ ಕಳ್ಳರು, ಅತ್ಯಾಚಾರಿಗಳು, ಕೊಲೆಗಡುಕರು ಮತ್ತು ದರೋಡೆಕೋರರಿದ್ದಾರೆ' ಎಂದು ಛತ್ತೀಸ್‌ಗಢದ ಸಾರ್ವಜನಿಕ ಸಭೆಯೊಂದರಲ್ಲಿ ಬಾಬಾ ರಾಮದೇವ್ ಬಹಿರಂಗ ಆಕ್ರೋಶ ವ್ಯಕ್ತಪಡಿಸಿರುವುದು ಸಂಸತ್ತಿನಲ್ಲೂ ಚರ್ಚೆಗೆ ಎಡೆ ಮಾಡಿಕೊಟ್ಟಿದೆ. ಬಹುತೇಕ ಎಲ್ಲ ಪಕ್ಷಗಳ ಸಂಸದರೂ ರಾಮದೇವ್‌ರ ಈ ಟೀಕೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ರಾಮ್‌ದೇವ್‌ರ ಈ ಹೇಳಿಕೆಯಿಂದಾಗಿ ಸಂಸತ್ತಿನ ಗೌರವಕ್ಕೆ ಚ್ಯುತಿ ಬಂದಿದೆ. ಸಂಸದರ ಹಕ್ಕುಚ್ಯುತಿಯಾಗಿದೆ ಎಂದು ಹಕ್ಕುಚ್ಯುತಿಯ ಸೂಚನೆಯನ್ನೂ ಲೋಕಸಭೆಯ ಸ್ಪೀಕರ್‌ಗೆ ಕಳುಹಿಸಲಾಗಿದೆ. ಸ್ವತಃ ಸ್ಪೀಕರ್ ಮೀರಾ ಕುಮಾರ್, 'ಬಾಬಾ ರಾಮದೇವ್ ಅವರು ಸಂಸತ್ತಿನಂತಹ ಪ್ರಜಾಪ್ರಭುತ್ವದ ಉನ್ನತ ಅಂಗಸಂಸ್ಥೆಗೆ ಗೌರವ ಕೊಡುವುದನ್ನು ಕಲಿಯಬೇಕು' ಎಂದು ಸೂಚಿಸಿದ್ದಾರೆ.

ಸಂಸತ್ತಿನ ಬಗ್ಗೆ ಹೀಗೆ ಅವಹೇಳನ ಮಾಡಿದವರಲ್ಲಿ ರಾಮದೇವ್ ಮೊದಲನೆಯವರಲ್ಲ. ಇತ್ತೀಚೆಗಷ್ಟೇ ಅಣ್ಣಾ ಹಜಾರೆ ತಂಡದ ಅರವಿಂದ ಕೇಜ್ರಿವಾಲ್ ಕೂಡಾ ಹೀಗೆಯೇ ಟೀಕೆ ಮಾಡಿದ್ದರು. ಈಗ ಪ್ರತಿಟೀಕೆ ಬಂದಾಗ, ಬಾಬಾ ರಾಮದೇವ್ ಅವರು, 'ನಾನು ಎಲ್ಲ ಸಂಸದರನ್ನೂ ಟೀಕೆ ಮಾಡಿಲ್ಲ. ಆದರೆ ಸಂಸತ್ತಿನಲ್ಲಿ ಒಬ್ಬನೇ ಒಬ್ಬ ಕ್ರಿಮಿನಲ್ ಹಿನ್ನೆಲೆಯ ಸದಸ್ಯ ಇಲ್ಲ ಎಂದು ಸ್ಪೀಕರ್ ಗ್ಯಾರಂಟಿ ಕೊಡಬಲ್ಲರೆ?' ಎಂದು ಮರುಪ್ರಶ್ನೆ ಹಾಕಿದ್ದಾರೆ. ಹಾಗೆ ಸ್ಪೀಕರ್ ಭರವಸೆ ಕೊಡುವಷ್ಟು ಸಂಸತ್ತಿನ ಪರಿಸ್ಥಿತಿ ಚೆನ್ನಾಗಿಲ್ಲ ಎನ್ನುವುದೂ ಸತ್ಯ. ರಾಮದೇವ್ ಹೇಳಿಕೆಯಲ್ಲಿ ಸತ್ಯವೂ ಇದೆ ಎನ್ನುವುದು ಸುಳ್ಳಲ್ಲ.

ಆದರೆ ಸ್ವತಃ ರಾಮದೇವ್ ಕೂಡಾ ಹಲವು ಆರೋಪಗಳನ್ನು ಎದುರಿಸುತ್ತಿದ್ದಾರೆ ಎನ್ನುವುದು ಏನನ್ನು ಸೂಚಿಸುತ್ತದೆ? ಮಧ್ಯಪ್ರದೇಶದ ಸೆಹೋರ್‌ನಲ್ಲಿ ಇತ್ತೀಚೆಗೆ 100 ಎಕ್ರೆ ಜಮೀನು ಖರೀದಿಸಿರುವ ರಾಮದೇವ್ ಎಷ್ಟು ನೋಂದಣಿ ಶುಲ್ಕ ಕಟ್ಟಿದ್ದಾರೆ? ವಿದೇಶಗಳಲ್ಲಿ ಸುಮಾರು 100 ಕೋಟಿ ರೂಪಾಯಿ ಮೌಲ್ಯದ ಔಷಧಿಗಳನ್ನು ಮಾರಾಟ ಮಾಡಿರುವ ಅವರು ಅದಕ್ಕಾಗಿ ಜಾರಿ ನಿರ್ದೇಶನಾಲಯದಿಂದ ನೋಟಿಸ್ ಪಡೆದಿಲ್ಲವೆ? 70 ಕೋಟಿ ರೂಪಾಯಿಗಳಷ್ಟು ತೆರಿಗೆ ಕಟ್ಟಲು ಮಾರಾಟ ತೆರಿಗೆ ಇಲಾಖೆಯಿಂದ ನೋಟಿಸ್ ಪಡೆದಿಲ್ಲವೆ? ಉತ್ತರಾಖಂಡದಲ್ಲಿ ರೈತರ ಭೂಮಿ ಒತ್ತುವರಿ ಮಾಡಿಲ್ಲವೆ?– ಮುಂತಾಗಿ ರಾಜಕಾರಣಿಗಳು ಮರುಪ್ರಶ್ನೆ ಕೇಳಲು ಆರಂಭಿಸಿದ್ದಾರೆ. ವಿದೇಶಿ ಕಪ್ಪುಹಣದ ಬಗ್ಗೆ ಪ್ರಶ್ನೆ ಎತ್ತುವ ಮೊದಲು, ರಾಮದೇವ್ ಸ್ವತಃ ಕಪ್ಪುಹಣದ ಆರೋಪಗಳಿಂದ ಪಾರಾಗಬೇಕು ಎನ್ನುವ ಸೂಚನೆ ಇದರಲ್ಲಿದೆ. ನ್ಯಾಯಬದ್ಧ ವ್ಯಾಪಾರ ಮಾಡುವುದರಿಂದ ರಾಮದೇವ್ ಅವರನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಆದರೆ ಊರು ತುಂಬ ಆಸ್ತಿ ಪಾಸ್ತಿ ಮಾಡಿರುವ ರಾಮದೇವ್ ಅವರು, ಕಪ್ಪುಹಣಕ್ಕೆ ಸಂಬಂಧಿಸಿ ಎತ್ತುವ ಪ್ರಶ್ನೆಗಳಿಗೆ ಈ ಶ್ರೀಮಂತಿಕೆಯೇ ಮೂಗುದಾರ ಆಗಬಾರದು ಎನ್ನುವುದೂ ನಿಜ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65